# ಯೋಜಿತ ಮಧ್ಯಪ್ರವೇಶ ಮತ್ತು ಸ್ವಾತಂತ್ರ್ಯ | ಮಕ್ಕಳಿಗೆ ಏನು ಬೇಕು ಎಂಬುದರ ವ್ಯಕ್ತಿಗತ ಪರ್ಯಾಲೋಚನೆ

ವಾಣಿ ಪೆರಿಯೋಡಿ ಮತ್ತು ಉಮಾಶಂಕರ ಪೆರಿಯೋಡಿ

ವಾಣಿ ಮತ್ತು ಉಮಾಶಂಕರ ಪೆರಿಯೋಡಿ, ತಾವು ಮಕ್ಕಳಮಿಲನ ಮತ್ತು ಅದಕ್ಕೆ ವಾಡಿಕೆಯಲ್ಲಿಲ್ಲದ ಕ್ರಮಗಳನ್ನು ಅಳವಡಿಸಿಕೊಂಡಿದ್ದರ ಬಗ್ಗೆ ನೇರವಾಗಿ ಇಲ್ಲಿ ಸ್ಮರಿಸಿಕೊಂಡಿದ್ದಾರೆ. ಅನುಸರಿಸದೇ ಇರುವುದು ಎಂದರೆ, ಸರಿ ತಪ್ಪುಗಳನ್ನು ಮಾಡುತ್ತಾ, ಮರಳಿ ಯತ್ನವ ಮಾಡು ಎಂದರ್ಥವೇ ಹೊರತು ಯಾವತ್ತೂ ಗಾಢವಾದ ಪರ್ಯಾಲೋಚನೆಯ ಕೊರತೆ ಆಗಿರಲಿಲ್ಲ. ಇದು ಅವರ ಮಕ್ಕಳ ಮೇಲೆ ಧನಾತ್ಮಕ ಪರಿಣಾಮ ಬೀರಿತು ಜೊತೆಗೆ ಹೊಂದಾಣಿಕೆ, ಸಹಾನುಭೂತಿ ಮತ್ತು ಬದುಕಿನ ಯಾವುದೇ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವಂತಹ ಸಾಮರ್ಥ್ಯವನ್ನು ಬೆಳೆಸಿತು.

ನಮ್ಮ ಮೊದಲ ಮಗು ಫೆಬ್ರವರಿ ತಿಂಗಳಿನಲ್ಲಿ ಜನಿಸಬೇಕು ಎಂಬುದು ನಮ್ಮ ಯೋಜನೆಯಾಗಿತ್ತು. ಎಲ್ಲವೂ ಸುಸೂತ್ರವಾಗಿ ಸಾಗುತ್ತಿತ್ತು. ವೈದ್ಯರು ಕೊಟ್ಟ ಹೆರಿಗೆ ದಿನಾಂಕ ಫೆಬ್ರುವರಿ 10. ನಮ್ಮ ಯೋಜನೆಯಂತೆಯೇ ಎಲ್ಲವೂ ನಡೆಯುತ್ತಿರುವುದಕ್ಕೆ ನಾವು ಖುಷಿಯಾಗಿದ್ದೆವು. ನಮ್ಮ ಮೊದಲ ಮಗಳು ಮೂರು ವಾರ ಬೇಗನೆ, ಜನವರಿಯಲ್ಲೇ ಬರುವ ಮೂಲಕ, ಮಕ್ಕಳನ್ನು ಸಾಕುವುದೆಂದರೆ ಪ್ರತಿಯೊಂದೂ ನಮ್ಮ ಯೋಜನೆಯಂತೆಯೇ ನಡೆಯಲಾರದು ಎಂಬ ಮೊದಲ ಪಾಠವನ್ನು ಕಲಿಸಿದಳು! ಖಲೀಲ್ ಗಿಬ್ರಾನ್‌ನ, 'ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ' ಎಂಬ ಮಾತು ನಮಗೆ ನೆನಪಾಯಿತು.

ಮಕ್ಕಳ ವಿಚಾರದಲ್ಲಿನ ಯಾವುದೇ ಮಧ್ಯಪ್ರವೇಶದಲ್ಲಿ ನಿಶ್ಚಿತ ಫಲವನ್ನು ನಿರೀಕ್ಷಿಸುವುದು ಬಹಳ ಕಷ್ಟ. ಮಕ್ಕಳ ವಿಚಾರದಲ್ಲಿ, ಒಂದೋ ನಾವು ಯಾವುದೇ ಯೋಜಿತ ಮಧ್ಯಪ್ರವೇಶ ಇಲ್ಲದೆಯೇ ಅವರನ್ನು ಅವರ ಪಾಡಿಗೆ ಬೆಳೆಯಲು ಬಿಡಲೂ ಸಾಧ್ಯವಿಲ್ಲ, ಇಲ್ಲವೇ, ದೃಢವಾದ ಯಾವುದೇ ಯೋಜನೆಯನ್ನು ಹಾಕಿಕೊಳ್ಳಲೂ ಆಗುವುದಿಲ್ಲ. ಹಾಗಿದ್ದರೆ, ಏನಾದರೂ ಆಗಲಿ ಎಂದು ನಾವು ಅದರ ಪಾಡಿಗೆ ಬಿಡಲಾದೀತೇ? ಹಾಗೇ, ಅವರಿಗೆ ಯಾವುದೇ ಮಾರ್ಗದರ್ಶನ ಮಾಡದೇ ಇರಲಾದೀತೇ? ಇವು ಅತ್ಯಂತ ಕಷ್ಟದ ಆಯ್ಕೆಗಳು. ನಮ್ಮ ಮಕ್ಕಳು ಸ್ವತಂತ್ರರಾಗಿ, ಧೈರ್ಯವಂತರಾಗಿ, ಮಾನವೀಯತೆಯಿಂದ ಮತ್ತು ಮುಕ್ತವಾಗಿ ಇರಬೇಕು ಎಂದು, ಹೆತ್ತವರಾಗಿ ನಾವು ಇಚ್ಛಿಸಿದ್ದುದರಿಂದ, ನಾವು ಏನೇನು ಮಾಡಿದೆವು ಎಂಬುದನ್ನು ಈ ಲೇಖನದಲ್ಲಿ ವಿವರಿಸಲು ಪ್ರಯತ್ನಿಸಿದ್ದೇವೆ. ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬ ಬಗ್ಗೆ ಬೇರೆಯವರಿಂದ ನಮಗೆ ಸಹಾಯ ಸಿಕ್ಕಿದರೂ, ನಮಗೆ ಯಾವುದೇ ಯೋಜನೆಗಳಿರಲಿಲ್ಲ. ಮೂಲತಃ, ನಾವು ಸರಿ–ತಪ್ಪುಗಳನ್ನು ಮಾಡುತ್ತಾ, ಕೆಲವೊಮ್ಮೆ ಗೆಲ್ಲುತ್ತಾ ಇನ್ನು ಕೆಲವೊಮ್ಮೆ ಸೋಲುತ್ತಾ ಹೋದೆವು. ಎಷ್ಟೋ ಸಂಗತಿಗಳು ಸಹಜವಾಗಿ ಆದವು, ಇನ್ನೂ ಹಲವು ನಾವು ಹೇಗೆ ನಮ್ಮ ಬದುಕನ್ನು ಸಾಗಿಸುತ್ತಿದ್ದೇವೆಯೋ ಹಾಗೇ ಸಾಗುತ್ತಾ ಹೋಯಿತು!.

ಹಿಂದಿರುಗಿ ನೋಡುವಾಗ, ಕೆಲವೊಂದು ತೀರ್ಮಾನಗಳು ಮಕ್ಕಳ ಬೆಳವಣಿಗೆಗೆ ಸಹಾಯವಾಗಿದ್ದನ್ನು ಗಮನಿಸುತ್ತೇವೆ. ಮತ್ತೆ ನಮ್ಮ ಹಳ್ಳಿಯತ್ತ ನೋಡಿದರೆ, ಅದೇ ಅಂತಹ ಒಂದು ತೀರ್ಮಾನವಾಗಿತ್ತು. ಹಳ್ಳಿಯಲ್ಲಿ ನೆಲೆಸಿದ್ದು ಅನೇಕ ರೀತಿಯಿಂದ ನಮಗೆ ಸಹಾಯಕವಾಯಿತು. ನಮ್ಮ ಮಕ್ಕಳು ಗ್ರಾಮೀಣ ವಾತಾವರಣದಲ್ಲಿ ಬೆಳೆದರು. ನಮ್ಮ ಹಳ್ಳಿ ಮಂಗಳೂರಿನಿಂದ ಕೇವಲ 22 ಕಿ.ಮೀ. ದೂರದಲ್ಲಿದ್ದರೂ, ಅದು ಬಂಟ್ವಾಳ ತಾಲೂಕಿನ ಅತ್ಯಂತ ಹಿಂದುಳಿದ ಗ್ರಾಮಗಳಲ್ಲೊಂದಾಗಿತ್ತು. ನಮ್ಮ ಮನೆಗೆ 1985ರವರೆಗೂ ವಿದ್ಯುತ್ ಸಂಪರ್ಕ ಇರಲಿಲ್ಲ. ಆ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಹೊಂದಿದ್ದ ಮನೆಗಳು ಇದ್ದುದು ಕೆಲವೇ ಕೆಲವು. ನಮ್ಮ ಗ್ರಾಮದ ಜನರೊಂದಿಗೆ, ವಿಶೇಷವಾಗಿ ಯುವಕರೊಂದಿಗೆ ಕೆಲಸ ಮಾಡುತ್ತಿದ್ದ 'ಚಾವಡಿ' ಎಂಬ ಸಂಘಟನೆಯೊಂದಿಗೆ ನಾವು ಕೆಲಸ ಮಾಡಿದೆವು. ಪುರುಷ ಪ್ರಧಾನ ಕಲೆ ಎಂದೇ ಗುರುತಿಸಿಕೊಂಡಿರುವ ಜಾನಪದ ಕಲೆ 'ಯಕ್ಷಗಾನ'ದ ಬಗ್ಗೆ ಹೆಣ್ಣುಮಕ್ಕಳಿಗೆ ನಾವು ತರಬೇತಿ ನೀಡಿದೆವು. ನಮ್ಮ ಹೆಣ್ಣುಮಕ್ಕಳಿಗೆ ಅದೊಂದು ಸಹಜವಾದ ಉತ್ತೇಜನಕಾರಿ–ಯಾಯಿತು. ಅವರು ಗ್ರಾಮೀಣ ಭಾಗದ ಇನ್ನೂ ಹಲವು ಸಂಸ್ಕೃತಿಗಳನ್ನು ಕರಗತ ಮಾಡಿಕೊಂಡು, ತುಂಬಾ ಸ್ನೇಹಿತರನ್ನು ಸಂಪಾದಿಸಿಕೊಂಡರು. ನಮಗೆ ಔಪಚಾರಿಕವಾದ ಉದ್ಯೋಗ ಇರಲಿಲ್ಲ. ನಾವು ಫ್ರೀಲಾನ್ಸ್ ಉದ್ಯೋಗಿಗಳಾಗಿದ್ದೆವು. ಇದರಿಂದಾಗಿ, ಅವರು ಬಡತನವನ್ನೂ ಕಂಡರು. ನಮ್ಮಿಬ್ಬರ ಆದಾಯ ಅತ್ಯಲ್ಪವಾಗಿದ್ದುದರಿಂದ, ಬಡತನ ಇತ್ತು. ಆದ್ದರಿಂದ ಅವರು ಹಳ್ಳಿಯಲ್ಲಿ ಬಡತನದ ಜೊತೆಗೇ ಇರಬೇಕಾಯಿತು. ಇದು, ನಮ್ಮ ಹೆಣ್ಣುಮಕ್ಕಳಿಗೆ ಒಳ್ಳೆಯ ದೃಷ್ಟಿಕೋನವನ್ನು ಕಟ್ಟಿಕೊಟ್ಟಿದ್ದಲ್ಲದೆ, ಸಮಾಜದ ವೈವಿಧ್ಯತೆಯನ್ನು ಪರಿಚಯಿಸಿ, ದುರ್ಬಲ ವರ್ಗಗಳ ಬಗ್ಗೆ ಮನಸ್ಸು ಮಿಡಿಯುವಂತೆ ಮಾಡಿತು. ನಾವು ಬೆಂಗಳೂರಿಗೆ ಸ್ಥಳಾಂತರಗೊಂಡ ನಂತರವೂ ಅವರು ನಮ್ಮ ಹಳ್ಳಿಯ ಸ್ನೇಹಿತರೊಂದಿಗೆ ಸಂಪರ್ಕ ಮುಂದುವರಿಸಿದರು.

ನಾವು ತೆಗೆದುಕೊಂಡ ಮತ್ತೊಂದು ಮುಖ್ಯವಾದ ತೀರ್ಮಾನವೆಂದರೆ, ನಮ್ಮ ಮಕ್ಕಳನ್ನು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗೆ ದಾಖಲಿಸಿದ್ದು. ಇದು ನಿಜವಾಗಿಯೂ ಬಹಳ ಕಠಿಣವಾದ ತೀರ್ಮಾನ. ನಮ್ಮ ಸ್ನೇಹಿತರು ಮತ್ತು ಸಂಬಂಧಿಗಳು ನಮ್ಮನ್ನು ವಿರೋಧಿಸಿದರು. ಆದರೆ ನಾನು ಮತ್ತು ವಾಣಿ, ಸರ್ಕಾರಿ ಶಾಲೆಯಲ್ಲಿ ನಮ್ಮ ಮಕ್ಕಳು ಶ್ರೀಮಂತ ಅನುಭವಗಳನ್ನು ಗಳಿಸುತ್ತಾರೆ ಎಂದು ದೃಢವಾಗಿ ನಂಬಿದ್ದೆವು. ಸರ್ಕಾರಿ ಶಾಲೆಗಳಲ್ಲಿ ಒಳ್ಳೆಯ ಶಿಕ್ಷಣ ಸಿಗುವುದರ ಜೊತೆಗೆ, ಮಕ್ಕಳ ಮೇಲೆ ಖಾಸಗಿ ಶಾಲೆಗಿಂತ ಕಡಿಮೆ ಒತ್ತಡ ಇರುತ್ತದೆ ಎಂಬ ಸಮಾಧಾನ ನಮಗೆ ಇತ್ತು. ಸರ್ಕಾರಿ ಶಾಲೆಗಳಲ್ಲಿ ಸಾಕಷ್ಟು ಸ್ಥಳಾವಕಾಶವೂ ಇದ್ದು, ನಮ್ಮ ಮಕ್ಕಳು ಹಳ್ಳಿಯ ಇತರ ಮಕ್ಕಳೊಂದಿಗೆ ಹಾಗೂ ದುರ್ಬಲ ವರ್ಗದ ಮಕ್ಕಳೊಂದಿಗೆ ಬೆಳೆಯಲು ಅವಕಾಶವಿತ್ತು. ಇದು, ಅವರ ಭವಿಷ್ಯದ ಬದುಕಿಗೆ ಭದ್ರ ತಳಪಾಯವಾಗುತ್ತದೆ ಎಂದು ನಮಗೆ ಗೊತ್ತಿತ್ತು.

ಅಸಮಾಧಾನದಿಂದಲೇ ನಮ್ಮ ಬಳಿ ಬಂದ ಸ್ನೇಹಿತರು, ಖಾಸಗಿ ಶಾಲೆಗಳಲ್ಲಿ ಸಿಗುವಂತಹ ಸಮೃದ್ಧ ಅನುಭವಗಳಿಂದ ನಿಮ್ಮ ಮಕ್ಕಳು ವಂಚಿತರಾಗುವಂತೆ ಮಾಡುತ್ತಿದ್ದೀರಿ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಖಾಸಗಿ ಶಾಲಾ ಶಿಕ್ಷಣದಿಂದ ತಮ್ಮನ್ನು ವಂಚಿತರನ್ನಾಗಿ ಮಾಡಿದ್ದರ ಬಗ್ಗೆ ಮಕ್ಕಳು ಮುಂದೆ ಎಂದಾದರೂ ಪ್ರಶ್ನಿಸಿದರೆ ನೀವೇನು ಹೇಳುತ್ತೀರಿ ಎಂದೂ ಅವರು ಕೇಳಿದರು. ಇದು ನಮ್ಮನ್ನು ಚಿಂತೆಗೀಡು ಮಾಡಿತು. ಹಾಗಾಗಿ, ಮಕ್ಕಳಿಗೆ ವಿವಿಧ ರೀತಿಯ ಅನುಭವಗಳನ್ನು ಕಟ್ಟಿಕೊಡಲು ನಾವೇ ಶಾಲೆಗಳೊಂದಿಗೆ ಕೆಲಸ ಮಾಡಬೇಕು ಎಂದು ತೀರ್ಮಾನಿಸಿದೆವು. ಮಕ್ಕಳು ಸಮಗ್ರವಾಗಿ ಅಲ್ಲದೆ, ಸ್ವತಂತ್ರ, ತರ್ಕಬದ್ಧ, ಮಾನವೀಯ ಮತ್ತು ಮುಕ್ತವಾಗಿ ಬೆಳೆಯಲು ನೆರವಾಗುವಂತಹ ಅನುಭವಗಳನ್ನು ಮತ್ತು ಅನಾವರಣಗೊಳ್ಳುವ ಅವಕಾಶಗಳನ್ನು ನಾವು ಯೋಜಿಸಿದೆವು. ಇದಕ್ಕಾಗಿ, ಕ್ರಿಯಾತ್ಮಕ ಮತ್ತು ನಾಯಕತ್ವದ ಅನುಭವಗಳನ್ನು ಕೊಡುವ ಹಲವಾರು ಕ್ರಿಯಾಶೀಲ ಚಟುವಟಿಕೆಗಳನ್ನು, ನಾಯಕತ್ವ ಕಾರ್ಯಾಗಾರಗಳನ್ನು, ಕಥೆ ಓದುವ ಗೋಷ್ಠಿಗಳನ್ನು ಆಗಾಗ ನಾವು ಸಂಘಟಿಸಿದೆವು. ಇದರಿಂದಾಗಿ ಮಕ್ಕಳು ಶಾಲೆಯಲ್ಲಿ ಪುಸ್ತಕಗಳಿಗೆ ತೆರೆದುಕೊಂಡರು. ಈ ಪ್ರಾಯೋಗಿಕ ಅವಧಿಗಳಿಗೆ ನಮ್ಮ ಸ್ನೇಹಿತರು ಅಪಾರ ನೆರವು ನೀಡಿದರು. ನಮ್ಮ ಮಕ್ಕಳು ಬೆಳೆದ ನಂತರವೂ ನಾವು ಈ ಚಟುವಟಿಕೆಗಳನ್ನು ಶಾಲೆಯಲ್ಲಿ ಮತ್ತು ಹಳ್ಳಿಯಲ್ಲಿ ಮುಂದುವರಿಸಿದೆವು. ನಮ್ಮ ಮಕ್ಕಳು ಮತ್ತು ಅವರ ಸ್ನೇಹಿತರು ಈಗಲೂ ಹಳ್ಳಿಯ ಮಕ್ಕಳಿಗಾಗಿ ಈ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುತ್ತಾರೆ. ಸ್ಥಳೀಯ ಸರ್ಕಾರಿ ಶಾಲೆಯಲ್ಲಿ ಅಭ್ಯಾಸ ಮಾಡಿದ್ದರಿಂದ ನಮ್ಮ ಮಕ್ಕಳಲ್ಲಿ ವಿಭಿನ್ನ ದೃಷ್ಟಿಕೋನ ಬೆಳೆಯುವಂತಾಯಿತು.

ಏಳನೇ ತರಗತಿಯವರೆಗೂ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಓದಿದ ನಂತರ ನಮ್ಮ ಮಕ್ಕಳು ಬೆಂಗಳೂರಿನ ಮಾಗಡಿಯ ವರದೇನಹಳ್ಳಿಯಲ್ಲಿರುವ ಸೆಂಟರ್ ಫಾರ್ ಲರ್ನಿಂಗ್ (ಸಿಎಫ್ಎಲ್) ಎಂಬ ಪರ್ಯಾಯ ಶಾಲೆಗೆ ಸೇರಿದರು. ಆ ಶಾಲೆಗೆ ಸೇರುವಾಗ ನಮ್ಮ ಮಕ್ಕಳಿಗೆ ಇಂಗ್ಲಿಷ್‌ನ ಗಂಧ ಇರಲಿಲ್ಲ. ಆದರೆ ಶಾಲೆ ಅವರಲ್ಲಿ ಆತ್ಮವಿಶ್ವಾಸ ತುಂಬಿದ್ದಲ್ಲದೆ, ಎಂದೂ ಅವರಲ್ಲಿ ಕೀಳರಿಮೆ ಕಾಡದಂತೆ ನೋಡಿಕೊಂಡಿತು. ಅವರ ಇಂಗ್ಲಿಷ್ ಜ್ಞಾನ ವೃದ್ಧಿಗಾಗಿ ಶಾಲೆ ನಮ್ಮ ಮಕ್ಕಳ ಜೊತೆಗೆ ಮಾಡಿದ ಪ್ರಾಜೆಕ್ಟ್ ಬಹಳ ಕ್ರಿಯಾಶೀಲವಾಗಿತ್ತು. ಕನ್ನಡ ಮಾಧ್ಯಮದ ಸರ್ಕಾರಿ ಶಾಲಾ ಮಕ್ಕಳಿಗಾಗಿ ಇಂಗ್ಲಿಷ್‌ನಲ್ಲಿ ಒಂದು ನಾಟಕ ಸಿದ್ಧಪಡಿಸಿ ನಿರ್ದೇಶಿಸುವಂತೆ ನಮ್ಮ ಮಕ್ಕಳಲ್ಲಿ ಅವರು ವಿನಂತಿಸಿದರು. ಆ ಶಾಲೆಯ ಶಿಕ್ಷಕರು ನಮ್ಮ ಮಕ್ಕಳ ಪಾಲಿಗೆ ಅತ್ಯುತ್ತಮ ಮಾರ್ಗದರ್ಶಿಗಳಾದರು. ನಮ್ಮ ಮಕ್ಕಳ ಬಗ್ಗೆ ನಮಗಿಂತ ಹೆಚ್ಚು ಅವರೇ ತಿಳಿದುಕೊಂಡಿದ್ದರು. ಆದ್ದರಿಂದ ಸಹಜವಾಗಿ, ನಮ್ಮ ಹುಡುಗಿಯರು ಅವರ ಮಾರ್ಗದರ್ಶನದಲ್ಲೇ ಇರಲಿ ಎಂದು ನಾವು ಬಿಟ್ಟೆವು. ಶಾಲೆಯು ನಮ್ಮ ಮಕ್ಕಳಿಗೆ ಹೆಚ್ಚು ವಿಮರ್ಶಾತ್ಮಕವಾಗಿರಲು, ಪ್ರತಿಯೊಂದನ್ನು ಪ್ರಶ್ನಿಸಲು ಮತ್ತು ಪರ್ಯಾಲೋಚಿಸಲು ಅವಕಾಶ ನೀಡಿದೆ. ತೀರಾ ವಿಭಿನ್ನವಾದ ಸಾಮಾಜಿಕ ಚೌಕಟ್ಟಿಗೆ ನಮ್ಮ ಮಕ್ಕಳನ್ನು ಆ ಶಾಲೆ ಪರಿಚಯಿಸಿದ್ದಲ್ಲದೆ, ಸಮೃದ್ಧವಾದ ಸಾಮಾಜಿಕ ವೃತ್ತವನ್ನು ನೀಡಿದೆ.

ಮೌಲ್ಯಗಳನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿಯೂ, ಈ ಶೈಕ್ಷಣಿಕ ಸಂಸ್ಥೆಗಳು ಬಹಳ ಮುಖ್ಯ ಪಾತ್ರ ವಹಿಸಿದವು. ನಮ್ಮ ಮಕ್ಕಳಿಗೆ ಶಾಲೆ ಮತ್ತು ಮನೆಯ ನಡುವೆ ಯಾವುದೇ ಸಂಘರ್ಷ ಇರಲಿಲ್ಲ. ಮೊದಲಿಗೆ, ನಮ್ಮ ಮಕ್ಕಳನ್ನು ಸ್ವಾತಂತ್ರ್ಯ, ಬಡತನ, ದುರ್ಬಲತೆ ಮತ್ತು ವೈವಿಧ್ಯತೆಯ ಬಗ್ಗೆ ಸಂವೇದನಾಶೀಲರನ್ನಾಗಿಸಿದ್ದು ಸರ್ಕಾರಿ ಶಾಲೆ. ನಂತರ, ವಿಮರ್ಶಾತ್ಮಕವಾಗಿರುವುದನ್ನು, ಪ್ರತಿಯೊಂದನ್ನು ಪ್ರಶ್ನಿಸುವುದನ್ನು ಮತ್ತು ಪರ್ಯಾ–ಲೋಚಿಸುವಂತೆ ಇರುವುದನ್ನು ಸಿಎಫ್ಎಲ್ ಕಲಿಸಿಕೊಟ್ಟಿತು. ಅಂತಿಮವಾಗಿ, ಈ ಎಲ್ಲವೂ ಮರುಸ್ಥಾಪಿತಗೊಂಡು, ಕ್ರೋಢೀಕೃತವಾಗಿ ಮತ್ತು ಗಟ್ಟಿಯಾಗಿ ನೆಲೆನಿಂತದ್ದು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ.

ಆರಂಭದಿಂದಲೂ, ನಾವು ಪ್ರತಿಯೊಂದು ವಿಷಯಗಳನ್ನೂ ಮಕ್ಕಳೊಂದಿಗೆ ಚರ್ಚಿಸಿದ್ದೇವೆ, ಅದು ಹಣಕಾಸಿನ ವಿಷಯವೇ ಇರಲಿ, ನಮ್ಮ ಕುಟುಂಬಕ್ಕೆ ಮತ್ತೊಂದು ಮಗು ಬೇಕೇ ಎಂಬುದರ ಬಗ್ಗೆಯೇ ಇರಲಿ. ಹೀಗೆ ಚರ್ಚೆ ಮತ್ತು ಮಾತುಕತೆ ಮಾಡುವ ಅಭ್ಯಾಸದಿಂದ ನಮಗೆ ಬಹಳ ಸಹಾಯವಾಗಿದೆ. ಯಾವುದಾದರೂ ಮತ್ತು ಪ್ರತಿಯೊಂದನ್ನೂ ಚರ್ಚಿಸಿಯೇ ಒಗ್ಗಟ್ಟಿನ ತೀರ್ಮಾನ ತೆಗೆದುಕೊಳ್ಳುತ್ತಿದ್ದೆವು. ಅತಿಥಿಗಳಿಗೆ ಸಿದ್ಧಪಡಿಸಬೇಕಾದ ಊಟ, ನಮ್ಮ ಪ್ರವಾಸಗಳು, ಶಾಲೆಗೆ ಸೇರುವುದು, ನಮ್ಮಲ್ಲಿ ಯಾರಿಗಾದರೂ ಎದುರಾದ ಸಮಸ್ಯೆಗಳು– ಹೀಗೆ. ನಂತರದ ದಿನಗಳಲ್ಲಿ ಈ ಚರ್ಚೆ ನಿಧಾನವಾಗಿ ಸಂವಾದದ ಹಂತಕ್ಕೆ ಬಂತು. ಈಗ, ಪ್ರತಿಯೊಂದಕ್ಕೂ ಮಾತುಕತೆ ನಡೆಯುತ್ತದೆ. ಮಾತುಕತೆಯ ಮೂಲಕವೇ ತೀರ್ಮಾನಗಳು ಮತ್ತು ಪರಿಹಾರಗಳು ಮೂಡುತ್ತವೆ. ಅದೇನೂ ಸುಲಭವಲ್ಲ; ಹಿಂದೆ –ಮುಂದೆ ಯೋಚಿಸಬೇಕಾದ ಕಾರಣ ಸಾಕಷ್ಟು ಸಮಯ ಹಿಡಿಯುತ್ತದೆ; ಆದರೆ ಅಂತಿಮವಾಗಿ ಎಲ್ಲರ ಸಮ್ಮತಿಯೊಂದಿಗೆ ಸುಖಪ್ರದವಾಗಿ

ಕೊನೆಯಾಗುತ್ತದೆ. ನಮಗೆ ಮೊದಲ ಮಗುವಾಗಿದ್ದಾಗ, ನಮಗೆ ಮನೆಯಲ್ಲಿ ಯಾವುದೇ ಬೆಂಬಲ ಇರಲಿಲ್ಲ. ವಾಣಿ, ಮಹಿಳಾ ಸಮಖ್ಯದಲ್ಲಿ (ಕೇಂದ್ರ ಸರ್ಕಾರದ ಒಂದು ಯೋಜನೆ) ಮೈಸೂರಿನ ಜಿಲ್ಲಾ ಸಂಯೋಜಕಿಯಾಗಿ ಕೆಲಸ ಮಾಡುತ್ತಿದ್ದುದರಿಂದ, ಉಮಾಶಂಕರ್ ಮನೆಯಲ್ಲಿ ಉಳಿದುಕೊಳ್ಳುವುದು ಎಂದು ತೀರ್ಮಾನಿಸಿದೆವು. ಮಕ್ಕಳ ಪಾಲನೆ ಮತ್ತು ಮನೆ ನಿರ್ವಹಣೆ, ಮೂರೂ ಹೊತ್ತಿನ ಊಟೋಪಹಾರದ ತಯಾರಿ ಅವರ ಜವಾಬ್ದಾರಿಯಾಗಿತ್ತು. ನಮ್ಮ ಮಗುವಿಗೆ ಮೂರೂವರೆ ವರ್ಷವಾಗಿ ಅವಳು ಸ್ವತಂತ್ರಳಾಗುವವರೆಗೂ ಇದೇ ವ್ಯವಸ್ಥೆಯನ್ನು ಮುಂದುವರಿಸಿದೆವು. ತಾಯಿ ಕಚೇರಿಗೆ ಹೋಗುವುದು, ತಂದೆ ಮನೆ ನಿರ್ವಹಣೆ ಮಾಡುವುದು ಎಂಬ ವಾತಾವರಣದಲ್ಲಿಯೇ ನಮ್ಮ ಮಗಳು ಬೆಳೆದಳು. ಇದು, ನಮ್ಮ ಮಟ್ಟಿಗೆ, ಅವಳಿಗೆ ತೀರಾ ಸಹಜವಾಗಿ ಅನಿಸಿ, ಅವಳಲ್ಲಿ ಒಂದು ವಿಭಿನ್ನವಾದ ದೃಷ್ಟಿಕೋನವೇ ಬೆಳೆಯಲು ಕಾರಣವಾಯಿತು. ಅವಳು ಶಾಲೆಗೆ ಹೋಗುವಷ್ಟರಲ್ಲಿ ಒಂದು ಪ್ರಾಸಪದ್ಯ ಹೇಳುತ್ತಿದ್ದಳು. 'ಅಪ್ಪನಿಗೆ ಆಫೀಸ್ ಕೆಲಸ, ಅಮ್ಮನಿಗೆ ಮನೆ ಕೆಲಸ' ಎಂಬ ಹಾಡನ್ನು ಆಕೆ 'ಅಮ್ಮನಿಗೆ ಆಫೀಸ್ ಕೆಲಸ, ಅಪ್ಪನಿಗೆ ಮನೆ ಕೆಲಸ' (ತಂದೆ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ, ತಾಯಿ ಮನೆಯಲ್ಲಿ ಕೆಲಸ ಮಾಡುತ್ತಾರೆ ಎನ್ನುವುದರ ಬದಲು ಅಮ್ಮನಿಗೆ ಕಚೇರಿಯಲ್ಲಿ ಕೆಲಸ, ಅಪ್ಪನಿಗೆ ಮನೆಯಲ್ಲಿ ಕೆಲಸ ಎಂಬಂತೆ) ಎಂದು ಹಾಡುತ್ತಿದ್ದಳು. ನಮಗೆ ಅನಿಸುವ ಪ್ರಕಾರ, ಇದು ನಮ್ಮ ಮಕ್ಕಳ ಮೇಲೆ ಗಾಢ ಪರಿಣಾಮ ಬೀರಿತು – ಮುಖ್ಯವಾಹಿನಿಯ ಚಿತ್ರಕ್ಕಿಂತ ಸಂಪೂರ್ಣ ವಿಭಿನ್ನವಾದ ಮಾದರಿ ವ್ಯಕ್ತಿಗಳು ಅವರ ಮನೆಯಲ್ಲಿಯೇ ಇದ್ದರು.

ಮಕ್ಕಳೊಂದಿಗೆ ನಾವು ಮಾಡುವ ಕೆಲವು ಸರಳ ಸಂಗತಿಗಳೂ ಅವರ ಮೇಲೆ ದೀರ್ಘಕಾಲದ ಪರಿಣಾಮ ಬೀರುತ್ತವೆ. ನಮ್ಮ ಅಮ್ಮ (ಉಮಾಶಂಕರನ ತಾಯಿ) ನಮ್ಮೊಂದಿಗೆ ಇದ್ದು ನಮ್ಮ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ನಶ್ಯ ಸೇದುವ ಹವ್ಯಾಸವಿದ್ದ ಅವರು ಯಾವಾಗಲೂ ತಮ್ಮ ನಶ್ಯದ ಡಬ್ಬವನ್ನು ಕಳೆದುಕೊಳ್ಳುತ್ತಿದ್ದರು. ಆಗ ಹುಡುಕಾಟದ ಗಂಭೀರ ಪ್ರಯತ್ನ ನಡೆಯುತ್ತಿತ್ತು. ಪ್ರತಿಯೊಬ್ಬರೂ ಇದರಲ್ಲಿ ಭಾಗಿಯಾಗುತ್ತಿದ್ದೆವು. ಒಮ್ಮೆ, ನಮ್ಮ ದೊಡ್ಡ ಮಗಳು ಇನಿ ಅಮ್ಮನಿಗೆ ಹೇಳಿದಳು, 'ನೀವು ನಿಮ್ಮ ನಶ್ಯದ ಡಬ್ಬವನ್ನು ಯಾವಾಗಲೂ ಒಂದೇ ಸ್ಥಳದಲ್ಲಿ ಇಡಬೇಕು, ಆಗ ಅದು ಕಳೆದುಹೋಗುವ ಮತ್ತು ಹುಡುಕುವ ಪ್ರಮೇಯ ಎದುರಾಗುವುದಿಲ್ಲ' ಎಂದು. ತಮ್ಮ ಮೊಮ್ಮಗಳು ನೀಡಿದ ಸಲಹೆಯನ್ನು ಅಮ್ಮ ಅಂದಿನಿಂದ ಪಾಲಿಸಿದ್ದಷ್ಟೇ ಅಲ್ಲದೆ, ಮುಂದೆ ಎಂದೂ ನಶ್ಯದ ಡಬ್ಬ ಕಳೆದುಹೋದ ಪ್ರಸಂಗ ಎದುರಾಗಲೇ ಇಲ್ಲ. ಈ ಘಟನೆಯಿಂದಾಗಿ, ಜನರು ತನ್ನ ಸಲಹೆಯನ್ನು ಕೇಳಿ ಪಾಲಿಸಬಲ್ಲರು ಎಂಬ ಬಗ್ಗೆ ಒಬ್ಬ ಸಣ್ಣ ಮೊಮ್ಮಗಳ ಮನಸ್ಸಿನಲ್ಲಿ ಎಷ್ಟು ಹೆಮ್ಮೆ ಮೂಡಿರಬಹುದು ಎಂದು ಯಾರಾದರೂ ಊಹಿಸಬಹುದು.

ಒಮ್ಮೆ, ಸಣ್ಣ ಮಗಳು ಇಂದು, ನೆರೆಮನೆಯ ಮಗುವಿನೊಂದಿಗೆ ಆಟವಾಡುತ್ತಿದ್ದಳು. ಮಗು ತುಂಬಾ ಗಲಾಟೆ ಮಾಡುತ್ತಿದ್ದುದರಿಂದ ಉಮಾಶಂಕರ್ ಮಗುವನ್ನು ಗದರಿದರು. ಆ ಮಗು ತನ್ನ ಮನೆಗೆ ಹೋಯಿತು. ಆದರೆ ಇಂದು ಇದರಿಂದ ಮನಸ್ಸಿಗೆ ನೋವಾಗಿ ಅಳಲಾರಂಭಿಸಿದಳು. ಈ ಬಗ್ಗೆ ನೇರವಾಗಿ ಅಪ್ಪನ ಜೊತೆಗೇ ಮಾತನಾಡುವಂತೆ ವಾಣಿ ಹೇಳಿದಳು. ಇಂದು ಉಮಾಶಂಕರ್ ಬಳಿ ಹೋಗಿ, 'ಅವಳನ್ಯಾಕೆ ಬೈದಿದ್ದು? ನಾನು ಅವರ ಮನೆಗೆ ಹೋದಾಗ ಯಾರೂ ನನ್ನನ್ನು ಬೈಯ್ಯುವುದಿಲ್ಲ' ಎಂದಳು. ಉಮಾ ಯೋಚನೆ ಮಾಡಿ, 'ಕ್ಷಮಿಸು. ಇನ್ನೆಂದೂ ಅವಳನ್ನು ಬೈಯ್ಯುವುದಿಲ್ಲ' ಎಂದರು. ನಂತರ ಆ ಮಗು ನಮ್ಮ ಮನೆಗೆ ಬಂದಾಗ ಉಮಾಶಂಕರ್ ಮಾಡಿದ ಮೊದಲ ಕೆಲಸವೆಂದರೆ, ಆ ಮಗುವಿನ ಬಳಿ ಕ್ಷಮೆ ಕೇಳಿದ್ದು. ಇಂತಹ ಘಟನೆಗಳಿಂದ ಮಕ್ಕಳ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತವೆ ಎಂದು ನಾವು ಭಾವಿಸುತ್ತೇವೆ.

ಓದುವ ಅವಧಿಯಲ್ಲಿ ಇನಿ ಧ್ವಜಗಳ ಪುಸ್ತಕವೊಂದನ್ನು ನೋಡುತ್ತಿದ್ದಳು. ಅವಳು ತನ್ನ ತಾಯಿಗೆ ಹೇಳಿದಳು, 'ಅಮ್ಮ ಎಲ್ಲಾ ಧ್ವಜಗಳ ಪೈಕಿ ನಮ್ಮ ದೇಶದ ಧ್ವಜವೇ ಅತ್ಯುತ್ತಮ' ಎಂದು. ಆಗ ವಾಣಿ, 'ಹೌದು ನಮಗೆ ನಮ್ಮ ಧ್ವಜವೇ ಅತ್ಯುತ್ತಮ. ಅಮೆರಿಕನ್ನರಿಗೆ, ಅವರ ಧ್ವಜ, ಆಸ್ಟ್ರೇಲಿಯನ್ನರಿಗೆ ಅವರ ಧ್ವಜ, ಪಾಕಿಸ್ತಾನದವರಿಗೆ ಅವರ ಧ್ವಜವೇ ಶ್ರೇಷ್ಠ ಇರಬಹುದು. ಪ್ರತಿ ದೇಶಕ್ಕೂ ಅದರದ್ದೇ ಆದ ಧ್ವಜ ಇದ್ದು, ಅದನ್ನು ಅವರು ಪ್ರೀತಿಸುತ್ತಾರೆ. ಹಾಗಾಗಿ, ನಾವು ನಮ್ಮ ಧ್ವಜವನ್ನು ಇಷ್ಟಪಡುತ್ತೇವೆ ಎಂದು ಹೇಳಬಹುದೇ ವಿನಃ ನಮ್ಮ ಧ್ವಜವೇ ಶ್ರೇಷ್ಠ ಎಂದು ಅಲ್ಲ'. ನಾವು ಈ ಘಟನೆಯನ್ನು ಮರೆತೇ ಬಿಟ್ಟಿದ್ದೆವು. ಇತ್ತೀಚೆಗೆ, ಇನಿ ಸ್ನಾತಕೋತ್ತರ ಪದವಿಯಲ್ಲಿರುವಾಗ, ಅವಳು ಈ ಘಟನೆಯನ್ನು ನೆನಪಿಸಿ, ಅದು ಅವಳ ಮೇಲೆ ಇನ್ನಿಲ್ಲದಷ್ಟು ಪ್ರಭಾವ ಬೀರಿದ್ದು, ಸಂಗತಿಗಳನ್ನು ನೋಡುವ ದೃಷ್ಟಿಕೋನವನ್ನೇ ಬದಲಾಯಿಸಿದೆ ಎಂದಳು. ಹಾಗಂತ ನಮಗೆ ಗೊತ್ತೇ ಇರಲಿಲ್ಲ! ಇಂತಹ ಸಣ್ಣ ಸಣ್ಣ ಸಂಗತಿಗಳೇ ಮಕ್ಕಳಲ್ಲಿ ಮೌಲ್ಯಗಳನ್ನು ತುಂಬಿ, ಬೆಳೆಸುತ್ತವೆ.

ನಾವು, ಅತ್ಯಂತ ಕನಿಷ್ಠ ಮತ್ತು ಸರಳವಾದ ಹೆಂಚಿನ ಮನೆ ಕಟ್ಟಿದೆವು. ಅದಕ್ಕೆ ಸರಿಯಾದ ಕಿಟಕಿ ಬಾಗಿಲುಗಳೂ ಇರಲಿಲ್ಲ. ಅಮ್ಮ ಇದೇ ಮನೆಯಲ್ಲಿ ನಮ್ಮೊಂದಿಗೆ ಇರಲು ಬಂದರು. ನಮ್ಮ ಮಕ್ಕಳಿಗೆ ಇದೊಂದು ದೊಡ್ಡ ಅವಕಾಶವಾಯಿತು. ಗಟ್ಟಿ, ಮುಕ್ತ ಮತ್ತು ವಿವೇಚನೆಯ ಹೆಂಗಸಾದ ಅಮ್ಮನ ಕೈಯಲ್ಲೇ ಬೆಳೆದವರು ನಮ್ಮ ಮಕ್ಕಳು. ಹೊಸ ವಿಚಾರಗಳನ್ನು ಮುಕ್ತವಾಗಿ ಸ್ವೀಕರಿಸುತ್ತಿದ್ದ ಅವರು, ಮಕ್ಕಳನ್ನು ಸಾಕಷ್ಟು ಸ್ವಾತಂತ್ರ್ಯ ಕೊಟ್ಟು ಬೆಳೆಸಿದರು. ಮಕ್ಕಳೊಂದಿಗೆ ಆಪ್ತವಾಗಿದ್ದರು. ಶಾಲಾ ರಜಾ ದಿನಗಳಲ್ಲಿ ಅವರ ಎಂಟೂ ಮೊಮ್ಮಕ್ಕಳು ಮನೆಗೆ ಬರುತ್ತಿದ್ದರು. ಪೂರ್ತಿ ಎರಡು ತಿಂಗಳು ನಮ್ಮ ಮನೆಯಲ್ಲಿ ಉಳಿದುಕೊಂಡಿದ್ದ ಅವರೆಲ್ಲರನ್ನೂ ಅಮ್ಮನೇ ನೋಡಿಕೊಳ್ಳುತ್ತಿದ್ದರು. ಈ ರೀತಿಯ ಸಹಜೀವನ ಎಲ್ಲಾ ಮಕ್ಕಳಿಗೂ ದೊಡ್ಡ ಕಲಿಕೆಯಾಗಿತ್ತು. ಇನಿಯಲ್ಲ ಹಲ್ಲುಗಳಲ್ಲಿ ಅಂತರ ಇದ್ದು, ಮುಂದೆ

ಚಾಚಿಕೊಂಡಂತಿತ್ತು. ಅದನ್ನು ಸರಿಪಡಿಸಿಕೊಳ್ಳಲು ಅವಳು ಬಯಸಿದಳು. ಈ ಬಗ್ಗೆ ಮನೆಯಲ್ಲಿ ಚರ್ಚೆ ನಡೆಯಿತು. ಈ ರೀತಿಯ ಸೌಂದರ್ಯಕ್ಕೆ ನಾವು ಬೆಲೆ ಕೊಡುತ್ತೇವೆಯೇ? ನಮ್ಮ ನಂಬಿಕೆಗೆ ವಿರುದ್ಧವಾದ ಒಂದು ಸಂಗತಿಗೆ ಅಷ್ಟೊಂದು ದುಬಾರಿ ಮೊತ್ತ ವ್ಯಯಿಸಬೇಕೇ? ಇನಿಗಾಗಿ ನಾವು ತೀರ್ಮಾನ ತೆಗೆದುಕೊಳ್ಳಲಿಲ್ಲ. ಬದಲಿಗೆ, ನಿನಗೆ ಬೇಕಾದಲ್ಲಿ ಮುಂದುವರಿಯುವಂತೆ ನಾವು ಇನಿಗೆ ಹೇಳಿದೆವು. ಈ ಬಗ್ಗೆ ಮತ್ತೊಂದು ಮಾತನ್ನೂ ನಾವು ಆಡಲಿಲ್ಲ.

ನಾವು ಎಲ್ಲ ಹಬ್ಬಗಳನ್ನು– ದೀಪಾವಳಿ, ಇತರ ಹಿಂದೂ ಹಬ್ಬಗಳು, ಕ್ರಿಸ್ಮಸ್ ಮತ್ತು ರಂಜಾನ್ ಆಚರಿಸುತ್ತಿದ್ದೆವು. ಮಂಗಳೂರಿನಲ್ಲಿ ಕ್ರಿಸ್ಮಸ್ ಎಂದರೆ ಬಹಳ ಮೋಜು. ನಾವು ಎಷ್ಟೋ ಸ್ನೇಹಿತರ ಮನೆಗೆ ಭೇಟಿ ನೀಡುತ್ತಿದ್ದೆವು. ನಮ್ಮ ಇಂದು ಇತರರಿಗೆ ಉಡುಗೊರೆಗಳನ್ನು ಕೊಡುವ ಅಭ್ಯಾಸ ಶುರುಮಾಡಿದಳು. ಹಬ್ಬದ ದಿನ ಸಂಜೆ ಅವಳು ಕ್ರಿಸ್ಮಸ್ ಮರವನ್ನು ಅಲಂಕರಿಸಿ, ಸಾಂತಾಕ್ಲಾಸ್ ಬಂದು ಅದಕ್ಕೆ ಬೇರೆ ಬೇರೆ ಉಡುಗೊರೆಗಳನ್ನು ಕಟ್ಟಿದಂತೆ ಉಡುಗೊರೆಗಳನ್ನು ಕಟ್ಟುತ್ತಿದ್ದಳು. ಪ್ರತಿಯೊಬ್ಬರೂ ಅಚ್ಚರಿಯ ಉಡುಗೊರೆಗಾಗಿ ಎದುರು ನೋಡುತ್ತಿದ್ದರು (ಇದೊಂದು ವಾಡಿಕೆ ಆದೀತು ಎಂದು ನಾವು ಇದನ್ನು ನಿಲ್ಲಿಸಿಬಿಟ್ಟೆವು). ರಂಜಾನ್ ವೇಳೆ ನಾವು ನಮ್ಮ ಮುಸಲ್ಮಾನ ಗೆಳೆಯರನ್ನು ಭೇಟಿಯಾಗುತ್ತಿದ್ದೆವು. ನಮ್ಮ ಮನೆಯಲ್ಲಿ ಇಫ್ತಾರ್ ಏರ್ಪಡಿಸಿ ಅವರನ್ನು ಆಹ್ವಾನಿಸುತ್ತಿದ್ದುದೂ ಉಂಟು.

ಜಾತಿ ಎಂಬುದು ನಮ್ಮನ್ನು ನಿಗ್ರಹ ಮಾಡುವ ಸಂಗತಿಯಾಗಿರಲಿಲ್ಲ. ಇದನ್ನು ನಾವು ಕುಟುಂಬದಲ್ಲಿ ಮುಕ್ತ ಚರ್ಚೆ ಮಾಡುತ್ತಿದ್ದೆವು. ಉಮಾಶಂಕರ್ ಬಾಲ್ಯದಲ್ಲಿ ಅನುಭವಿಸಿದ್ದ ಜಾತಿ ಭೇದದ ಘಟನೆಗಳನ್ನು ಹೇಳುತ್ತಿದ್ದರು. ತಮ್ಮ ಜಾತಿಯಲ್ಲಿ ಪ್ರಮುಖವಾಗಿದ್ದ ಬ್ರಾಹ್ಮಣಿಕೆ ಸಂಸ್ಕೃತಿಯ ಬಗ್ಗೆ ವಾಣಿ ವಿವರಿಸುತ್ತಿದ್ದಳು. ಮೇಲ್ವರ್ಗ ಮತ್ತು ಕೆಳವರ್ಗ ಈ ಎರಡೂ ಅಂಶಗಳು, ಅವುಗಳ ಅಭಿವ್ಯಕ್ತಿ ಮತ್ತು ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳುತ್ತಾ ಮಕ್ಕಳು ಬೆಳೆದರು. ಮಕ್ಕಳು ಬಹಳ ಸಣ್ಣ ವಯಸ್ಸಿನಲ್ಲೇ ಜಾತಿ ಭೇದವನ್ನು ಅನುಭವಿಸಿದರು. ಅದನ್ನು ಎದುರಿಸುವ ಬಗೆಯನ್ನೂ ಆ ವಯಸ್ಸಿನಲ್ಲೇ ರೂಢಿಸಿಕೊಂಡರು. ವಾಣಿ, ತನ್ನ ಮಾತೃಭಾಷೆಯಾದ ಹವ್ಯಕ ಕನ್ನಡದಲ್ಲಿ ಮಕ್ಕಳೊಂದಿಗೆ ಮಾತನಾಡಿದರೆ, ನಾವು ಮನೆಯಲ್ಲಿ ಕನ್ನಡ ಮಾತನಾಡುತ್ತಿದ್ದೆವು. ಮಕ್ಕಳು ಅಮ್ಮನೊಂದಿಗೆ ಮತ್ತು ನೆರೆಹೊರೆಯವರೊಂದಿಗೆ ತುಳು ಕಲಿತರು. ಆದ್ದರಿಂದ ಮನೆಯಲ್ಲಿ ಸಾಂಸ್ಕೃತಿಕವಾಗಿ ಶ್ರೀಮಂತ ಸಂಯೋಜನೆ ಇತ್ತು. ನಮ್ಮ ಮಕ್ಕಳು ರಾಜಕೀಯ ಪ್ರಜ್ಞೆ ಇರುವ ನಾಗರಿಕರಾಗಿ ಬೆಳೆದಿದ್ದಾರೆ. ಇದು ಹೇಗೆ ಸಾಧ್ಯವಾಯಿತೋ ನಮಗೆ ತಿಳಿಯದು. ಬಹುಶಃ, ಅವರು ನಮ್ಮ ಎಲ್ಲ ಸ್ನೇಹಿತರು ಮತ್ತು ವಿವಿಧ ಗುಂಪುಗಳ ಜತೆಗಿನ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಿದ್ದ ಕಾರಣಕ್ಕೆ ಇರಬಹುದು. ಅಲ್ಲದೆ, ಚಳುವಳಿಗಳಲ್ಲಿ, ಧರಣಿಗಳಲ್ಲಿ, ಕಾರ್ಯಾಗಾರಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾ ರಾಜಕೀಯ ಪ್ರಜ್ಞೆಯನ್ನು ಗ್ರಹಿಸಿಕೊಂಡಿರಬಹುದು ಎಂದು ನನಗೆ ಅನಿಸುತ್ತದೆ. ನಾವು ಅವರನ್ನು ಯಾವುದೇ ಸಿದ್ಧಾಂತ ಅಥವಾ 'ಇಸಂ'ಗಳ ನೆಲೆಯಲ್ಲಿ ತರಬೇತುಗೊಳಿಸಲಿಲ್ಲ. ತಮ್ಮದೇ ಆದ ಅಭಿಪ್ರಾಯಗಳನ್ನು ತೆಗೆದುಕೊಳ್ಳಲು ಅವರು ಸ್ವತಂತ್ರರಿದ್ದರು. ಹೆಚ್ಚಿನಂಶ ಇದರಿಂದಲೇ ಅವಶ್ಯಕತೆಗೆ ತಕ್ಕಂತೆ ಅಭಿಪ್ರಾಯಗಳನ್ನು ರೂಪಿಸಲು ಮತ್ತು ನಿಲುವುಗಳನ್ನು ತೆಗೆದುಕೊಳ್ಳಲು ಅವರಿಗೆ ಸಾಧ್ಯವಾಯಿತು.

ಇಂದು, ಸರ್ಕಾರಿ ಶಾಲೆಯಲ್ಲಿ ಕಠಿಣ ಸಮಯವನ್ನು ಎದುರಿಸಬೇಕಾಯಿತು. ಅವಳನ್ನು ಅವಳ ಅಕ್ಕನೊಂದಿಗೆ ಹೋಲಿಸುತ್ತಿದ್ದರಲ್ಲದೆ, ಶಿಕ್ಷಕರು ಅವಳನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಈ ನೋವಿನ ಅನುಭವದಿಂದಾಗಿ ಶಾಲೆಗೆ ಹೋಗಲು ಆಕೆ ನಿರಾಕರಿಸುತ್ತಿದ್ದಳು. ನಾವು ಈ ಬಗ್ಗೆ ಸಾಕಷ್ಟು ಚಿಂತನೆ ನಡೆಸಿದ ಬಳಿಕ, ಶಾಲೆಗೆ ಹೋಗುವುದನ್ನು ನಿಲ್ಲಿಸುವಂತೆ ಇಂದುಗೆ ತಿಳಿಸಿದೆವು. ಅವಳಿಗೆ ಮನೆಯಲ್ಲೇ ಶಾಲೆ ಶುರುವಾಯಿತು. ನಮ್ಮ ಸ್ನೇಹಿತರು ಮನೆಯಲ್ಲೇ ಕೆಲವು ಪಾಠಗಳನ್ನು ಹೇಳಿಕೊಡುತ್ತಿದ್ದರೆ, ಇತರ ಪಾಠಗಳತ್ತ ವಾಣಿ ಗಮನ ಕೊಡುತ್ತಿದ್ದಳು. ಅವಳ ತೀರ್ಮಾನದೊಂದಿಗೆ ನಾವು ಬೆನ್ನಿಗೆ ನಿಂತಿದ್ದರಿಂದ ಇಂದುಗೆ ಸಾಕಷ್ಟು ಆತ್ಮವಿಶ್ವಾಸ ಬೆಳೆಯಿತು. ನಾವು ಒಟ್ಟಾಗಿ ಪ್ರವಾಸ ಹೋಗುತ್ತಿದ್ದೆವು. ಪ್ರವಾಸ ಎಂದರೆ, ಅನೇಕ ಸಲ ನಮ್ಮ ಸ್ನೇಹಿತರ ಮನೆಗಳಿಗೆ ಭೇಟಿಯೇ ಆಗಿರುತ್ತಿತ್ತು. ಆದರೆ ಹೀಗೆ ಒಟ್ಟಾಗಿ ಪ್ರವಾಸ ಹೋಗುವುದರಿಂದ ನಮಗೆ ಜತೆಯಾಗಿ ಸಮಯ ಕಳೆಯಲು ಅವಕಾಶ ಸಿಕ್ಕಿದ್ದಲ್ಲದೆ, ಅನೇಕ ಸಂಗತಿಗಳ ಬಗ್ಗೆ ಚರ್ಚಿಸಲೂ, ಜೀವನದ ಅನೇಕ ಸರಳ ಸಂಗತಿಗಳನ್ನು ತಿಳಿದುಕೊಳ್ಳಲೂ ಅವಕಾಶವಾಯಿತು. ಈ ಪ್ರವಾಸಗಳು ನಮ್ಮ ಕುಟುಂಬವನ್ನು ಇನ್ನಷ್ಟು ಬೆಸೆಯಿತು. ನಾವು ನಮ್ಮ ಮಕ್ಕಳನ್ನು ನಮ್ಮ ಸ್ನೇಹಿತರ ಮನೆಗಳಿಗೂ ಕರೆದೊಯ್ದೆವು ಮತ್ತು ಸಮುಚ್ಚಯ ಮತ್ತು ಇತರ ಎನ್‌ಜಿಓಗಳ ಸಭೆಗಳಿಗೂ ಕರೆದೊಯ್ದೆವು. ಇದರಿಂದ ಅವರಿಗೆ ನಮ್ಮ ಸ್ನೇಹಿತರ ಜತೆ ಸ್ವತಂತ್ರ ನಂಟು ಬೆಳೆಸಿಕೊಳ್ಳಲು ಸಾಧ್ಯವಾಯಿತು. ನಮ್ಮ ಕೆಲವು ಕಿರಿಯ ಸ್ನೇಹಿತರು ನಮ್ಮ ಮಕ್ಕಳಿಗೆ ಬಹಳ ಹತ್ತಿರವಾದರು.

ನಾವು ಹೆಚ್ಚು ಪ್ರಜ್ಞಾಪೂರ್ವಕವಾಗಿ ಮಾಡಿದ ಒಂದು ವಿಷಯವೆಂದರೆ, ನಮಗೆ ಸರಿ ಅನಿಸಿದ ಯಾವುದೇ ವಿಷಯವನ್ನು ಮಾಡುವಂತೆ ನಮ್ಮ ಮಕ್ಕಳಿಗೆ ಬಲವಂತ ಮಾಡದಿರುವುದು. ಇದು ನಾವು ಕಷ್ಟಪಟ್ಟು ಕಲಿತದ್ದು. ನಮ್ಮ ಹಲವಾರು ಹಿರಿಯ ಸ್ನೇಹಿತರು ತಮ್ಮ ಮಕ್ಕಳಿಗೆ ಮಾರ್ಗದರ್ಶನ ಮಾಡಲು ಅಥವಾ ಅವರ ಮೇಲೆ ಪ್ರಭಾವ ಬೀರಲು ಸಾಧ್ಯವಾಗದೆ ಒದ್ದಾಡುವುದನ್ನು ನಾವು ಕಂಡಿದ್ದೇವೆ. ಉನ್ನತ ಧ್ಯೇಯಗಳೊಂದಿಗೆ ಬದುಕಿದ ಎಷ್ಟೋ ಮಂದಿ, ತಮ್ಮ ಮಕ್ಕಳು ಅದನ್ನು ಅನುಸರಿಸುವಂತೆ ಮಾಡಲಾಗದ ನಿದರ್ಶನಗಳು ತುಂಬಾ ಇವೆ. ಇದು ನಮ್ಮನ್ನು ಸಾಕಷ್ಟು ಚಿಂತೆಗೀಡು ಮಾಡಿತ್ತು. ಹಾಗಾಗಿ, ನಾವು ನಮಗೆ ಬೇಕಾದಂತೆ ಬದುಕೋಣ ಆದರೆ ನಮ್ಮ ಜೀವನ ಶೈಲಿಯನ್ನಾಗಲೀ, ಬದುಕಿನ ಆಯ್ಕೆಗಳನ್ನಾಗಲೀ ನಮ್ಮ ಮಕ್ಕಳಿಗೆ ಹೇರಬಾರದು ಎಂದು ನಾವು ಸಣ್ಣ ವಯಸ್ಸಿನಲ್ಲಿಯೇ ತೀರ್ಮಾನಿಸಿದ್ದೆವು. ಅವರಿಗೆ ಸರಿ ಅನಿಸಿದ್ದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸ್ವಾತಂತ್ರ್ಯ ನಮ್ಮ ಮಕ್ಕಳಿಗೆ ಇರಬೇಕು. ನಾವು

ಅವರನ್ನು ಎಲ್ಲ ಕಾರ್ಯಾಗಾರಗಳಿಗೆ, ನಾಟಕಗಳಿಗೆ, ಬೀದಿ ನಾಟಕಗಳಿಗೆ, ಚಳುವಳಿಗಳಿಗೆ, ತರಬೇತಿಗಳಿಗೆ ಅಲ್ಲದೆ ನಾವು ಹೋದಲ್ಲೆಲ್ಲಾ ಕರೆದುಕೊಂಡು ಹೋಗುತ್ತಿದ್ದೆವು. ಕೆಲಸಮಯದ ನಂತರ, ನಮ್ಮೊಂದಿಗೆ ಬರುವ ಆಯ್ಕೆಯನ್ನು ನಾವು ಅವರಿಗೇ ಬಿಟ್ಟೆವು. ಆಗ ನಮ್ಮ ಜತೆ ಬರಬೇಕೋ, ಬೇಡವೋ ಎಂದು ಅವರೇ ತೀರ್ಮಾನಿಸುತ್ತಿದ್ದರು. ಎಷ್ಟೋ ಬಾರಿ, ಅವರ ತೀರ್ಮಾನದಿಂದ ನಮಗೆ ಬೇಸರವಾಗುತ್ತಿದ್ದರೂ, ನಾವು ನಮ್ಮ ಅಭಿಪ್ರಾಯವನ್ನು ಗೌರವಿಸಿ ಬೇರೆಯವರ ಅಭಿಪ್ರಾಯವನ್ನೂ ಗೌರವಿಸುತ್ತಿದ್ದೆವು. ಇದು ಪರಸ್ಪರರ ಮಧ್ಯೆ ಆರೋಗ್ಯಕರ ತಿಳಿವಳಿಕೆಯನ್ನು ಬೆಳೆಸಲು ಸಹಕಾರಿಯಾಯಿತು.

ನಮಗೆ ಪ್ರಯೋಜನವಾದ ಒಂದು ಸಂಗತಿ ಎಂದರೆ, ನಾವು ಒಬ್ಬರಿಗೊಬ್ಬರು ಅಪೇಕ್ಷಿಸಿದ್ದನ್ನು ಮಾಡಲು ಪರಸ್ಪರ ನೆರವಾದುದು. ಉದಾಹರಣೆಗೆ, ವಾಣಿಯ ಸೃಜನಶೀಲ ನಡೆಗಳಾದ ನಾಟಕ, ಕಸೂತಿ ಅಥವಾ ಅವರು ಬಯಸಿದ್ದನ್ನು ಮಾಡುವುದು, ಇನಿಯ ಆಸಕ್ತಿಗಳಾದ ನೃತ್ಯ ಮತ್ತು ಹಾಡುವಿಕೆ, ಇಂದುಗೆ ಕರಕುಶಲ ಕಲೆ ಮತ್ತು ಹೊಲಿಗೆ ಹವ್ಯಾಸ ಹೀಗೆ– ನಾವೆಲ್ಲರೂ ಅವರವರ ಹವ್ಯಾಸಗಳಿಗೆ ಒಬ್ಬರಿಗೊಬ್ಬರು ಉತ್ತೇಜನ ನೀಡಿದ್ದೇವೆ ಮತ್ತು ಪ್ರತಿಯೊಬ್ಬರಿಗೂ ಅವರ ಹವ್ಯಾಸಗಳನ್ನು ಮುಂದುವರೆಸಿಕೊಂಡು ಹೋಗಲು ಸ್ವಾತಂತ್ರ್ಯವನ್ನು ನೀಡಿದ್ದೇವೆ. ನಮ್ಮ ಕುಟುಂಬವು ಅತ್ಯಂತ ಸಂತೃಪ್ತವಾಗಿದ್ದುದು ಹೀಗೆಯೇ ಎಂಬುದು ನನ್ನ ಭಾವನೆ. ನಮ್ಮ ಮಕ್ಕಳ ಪಾಲನೆಯನ್ನು ರೀತಿ ಭಾರೀ ಹೊರೆಯಾಗಿ ಇಲ್ಲದೆ, ಲಘು ಸ್ಪರ್ಶವನ್ನಷ್ಟೇ ಕೊಟ್ಟಂತಿತ್ತು. ಮುರಿಯಲಾಗದ ಕಠಿಣ ಮತ್ತು ಕ್ಷಿಪ್ರವಾದ ಯಾವುದೇ ನಿಯಮಗಳನ್ನು ನಾವು ವಿಧಿಸಿಕೊಳ್ಳಲಿಲ್ಲ. ಯಾರಿಗೂ ಶಿಕ್ಷೆ ಇರಲಿಲ್ಲ. ಕಠಿಣವಾದ ಕಾರುಬಾರು ಇರಲಿಲ್ಲ. ಕೆಲವೇ ಮಾರ್ಗಸೂಚಿಗಳಿದ್ದವು. ಆ ಕ್ಷಣಕ್ಕೆ ನಮಗೆ ಸರಿ ಅನಿಸಿದ್ದನ್ನು ನಾವು ಮಾಡುತ್ತಾ ಹೋದೆವು. ಒಂದು ಕುಟುಂಬವಾಗಿ ಪ್ರತಿಯೊಂದಕ್ಕೂ ನಾವು ಸಮಾನ ಜವಾಬ್ದಾರಿಯನ್ನು ತೆಗೆದುಕೊಂಡೆವು. ಅದು ಬಹಳ ಸರಳ ಮಾರ್ಗವಾಗಿತ್ತು. ಹೆಚ್ಚಿನ ಬಿಕ್ಕಟ್ಟುಗಳಿಲ್ಲದೆ ಬದುಕು ಸುಗಮವಾಗಿ ಸಾಗುವುದು ನಮಗೆ ಮುಖ್ಯವಾಗಿತ್ತು. ನಮ್ಮಿಬ್ಬರ ನಡುವೆ ಅಂದರೆ ವಾಣಿ ಮತ್ತು ಉಮಾಶಂಕರ್ ನಡುವೆ ಇದ್ದ ಅನುಬಂಧವೇ ನಮಗೆ ದೊಡ್ಡ ಕೊಡುಗೆಯಾಗಿತ್ತು. ಒಂದೇ ರೀತಿಯ ಮೌಲ್ಯಗಳು, ಮಕ್ಕಳ ಪೋಷಣೆ ಬಗ್ಗೆ ಹೆಚ್ಚು ಕಡಿಮೆ ಒಂದೇ ನಿಲುವು ಹೊಂದಿದ್ದೆವು. ಇಬ್ಬರೂ ಭಿನ್ನಾಭಿಪ್ರಾಯಗಳನ್ನು ತಪ್ಪಿಸುತ್ತಿದ್ದೆವು. ಒಬ್ಬರನ್ನೊಬ್ಬರು ಅರ್ಥೈಸಿಕೊಳ್ಳುವುದು, ಭಿನ್ನಾಭಿಪ್ರಾಯ ಎದುರಾದಾಗ ಕ್ಷಿಪ್ರವಾಗಿ ಗ್ರಹಿಸಿಕೊಂಡು ಅದನ್ನು ನಿವಾರಿಸಲು ತಕ್ಷಣ ಪ್ರತಿಸ್ಪಂದಿಸುವುದು, ವಿಮರ್ಶಾತ್ಮಕವಾಗಿ ಸ್ಪಂದಿಸುವುದು ನಮ್ಮಿಬ್ಬರ ನಡುವೆ ಇದ್ದ ಸೂತ್ರ. ಇದೆಲ್ಲ ಸಾಧ್ಯವಾದುದು ಇಬ್ಬರೂ ಪರಸ್ಪರರ ಮೇಲಿಟ್ಟಿದ್ದ ಅತಿಯಾದ ಗೌರವದಿಂದ. ಇವತ್ತು, ನಮ್ಮ ಮಕ್ಕಳನ್ನು ಹೇಗೆ ಬೆಳೆಸಿದೆವು ಎಂದು ಹಿಂದಿರುಗಿ ನೋಡಿದಾಗ, ಎಷ್ಟೋ ವಿಷಯಗಳನ್ನು ನಾವು ಉದ್ದೇಶಪೂರ್ವಕವಾಗಿ ಮಾಡಿದ್ದರೂ, ಒಂದಷ್ಟು ವಿಷಯಗಳು ನಮ್ಮ ನಂಬಿಕೆಗೆ ವಿರುದ್ಧವಾಗಿ ನಡೆದುಹೋಗಿದ್ದನ್ನೂ ಗಮನಿಸುತ್ತೇವೆ.

ನಮ್ಮ ಮಕ್ಕಳಿಗಾಗಿ ನಾವು ಎಲ್ಲವನ್ನೂ ಯೋಜಿತವಾಗಿ ಮಾಡಲು ಸಾಧ್ಯವೇ? ಎಂಬ ಆರಂಭದ ಪ್ರಶ್ನೆಗೇ ಹಿಂದಿರುಗುವುದಾದರೆ, 'ಇಲ್ಲ' ಎಂಬ ಸ್ಪಷ್ಟ ಉತ್ತರ ಸಿಗುತ್ತದೆ! ಹಾಗಿದ್ದರೆ, ನಾವು ಅದನ್ನು ಹಾಗೇ ಬಿಟ್ಟುಬಿಡಲು ಸಾಧ್ಯವೇ? ಎಂದು ಕೇಳಿದರೆ, ಅದಕ್ಕೂ 'ಇಲ್ಲ' ಎಂಬುದೇ ಉತ್ತರ. ಎರಡನ್ನೂ ನಾವು ಸರಿದೂಗಿಸಿಕೊಂಡು ಹೋಗಬೇಕು. ಯೋಜಿತ ಮಧ್ಯಪ್ರವೇಶ ಮತ್ತು ಸ್ವಾತಂತ್ರ್ಯದ ನಡುವಿನ ಹೊಂದಾಣಿಕೆ! ಮಗುವಿಗೆ ತನ್ನ ಆಯ್ಕೆಯನ್ನು ತಾನೇ ಮಾಡಿಕೊಳ್ಳುವಂತೆ ನಾವು ಅವಕಾಶವನ್ನು ನೀಡಬೇಕು. ಮೂಲತಃ ಅವಳಿಗೆ ಬೆಂಬಲ ನೀಡಿ, ಅವಳು ಬಯಸಿದ್ದನ್ನು ಮಾಡಲು ಬಿಡಬೇಕು. ಮೂಲ ಸಂಗತಿ ಏನೆಂದರೆ, ನಾವು ತೋರಿಸಿಕೊಡಬೇಕಾದ/ಪ್ರದರ್ಶಿಸಬೇಕಾದ ಮೌಲ್ಯಗಳನ್ನು ಮೊದಲು ಬದುಕಿ ತೋರಿಸಬೇಕು. ಇದೇ ಅತ್ಯುತ್ತಮ ಪಾಠ! ನೀವು ಬಯಸಿದಂತೆ ನೀವು ಬದುಕಿ; ನಿಮ್ಮ ಮಕ್ಕಳು ತಮಗೆ ಬೇಕಾದ್ದನ್ನು ಆರಿಸಿಕೊಳ್ಳುತ್ತಾರೆ.




**ವಾಣಿ ಪೆರಿಯೋಡಿ** ಅವರು, ಲಿಂಗ ಸೂಕ್ಷ್ಮತೆ ಮತ್ತು ಕೌಟುಂಬಿಕ ದೌರ್ಜನ್ಯದ ಕ್ಷೇತ್ರಗಳಲ್ಲಿ ಮೂರು ದಶಕಗಳಿಂದ ದುಡಿದಿದ್ದಾರೆ. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರದ ಯೋಜನೆಯಾದ ಮಹಿಳಾ ಸಮಖ್ಯದ್ನ ಮೈಸೂರು ಜಿಲ್ಲಾ ಸಂಯೋಜಕಿಯಾಗಿದ್ದರು. ಕರ್ನಾಟಕದ ಮಹಿಳೆಯರ ಸಂಘಟನೆಯಾದ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ರಚನೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ದಿನಪತ್ರಿಕೆಗಳು ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಅವರು ಆಗಾಗ ಬರೆಯುತ್ತಿರುತ್ತಾರೆ. ಅವರು ಇತ್ತೀಚೆಗೆ ಮಕ್ಕಳಿಗಾಗಿ ಸಂವಿಧಾನದ ಕುರಿತು ಬರೆದ ಪುಸ್ತಕ 'ಮಕ್ಕಳಿಗಾಗಿ ಸಂವಿಧಾನ'. ಅವರು ಚಿಕ್ಕ ಮಕ್ಕಳಿಗೆ ಕತೆ ಹೇಳುವುದು ಮತ್ತು ಕತೆ ಓದುವುದು, ನಾಟಕದಲ್ಲಿ ಅಭಿನಯಿಸುವುದು, ಹಾಗೂ ಕಸೂತಿ ಕಲೆ ಅವರ ನೆಚ್ಚಿನ ಹವ್ಯಾಸಗಳು. ಅವರನ್ನು periodivani@gmail.com ಮೂಲಕ ಸಂಪರ್ಕಿಸಬಹುದು.





**ಉಮಾಶಂಕರ ಪೆರಿಯೋಡಿ** ಅಜೀಂ ಪ್ರೇಮ್‌ಜಿ ಫೌಂಡೇಷನ್ ನ ಕರ್ನಾಟಕ ರಾಜ್ಯ ಮುಖ್ಯಸ್ಥರಾಗಿರುವ ಉಮಾಶಂಕರ ಪೆರಿಯೋಡಿ ಅವರು, ಅಭಿವೃದ್ಧಿ ವಲಯದಲ್ಲಿ ಸುಮಾರು ೩೦ ವರ್ಷಗಳ ಅನುಭವ ಹೊಂದಿದ್ದಾರೆ. ರಾಷ್ಟ್ರೀಯ ಸಾಕ್ಷರತಾ ಅಭಿಯಾನ ಹಾಗೂ ಕರ್ನಾಟಕದ ಬಿಳಿಗಿರಿರಂಗನ ಬೆಟ್ಟದಲ್ಲಿ ಆದಿವಾಸಿಗಳ ಶಿಕ್ಷಣಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಕ್ಷೇತ್ರ ಕಾರ್ಯಕರ್ತರಿಗಾಗಿ ತಳಮಟ್ಟದ ತರಬೇತಿ ನೀಡುತ್ತಿರುವ ಉಮಾಶಂಕರ್, ಅದನ್ನು 'ಬರಿಗಾಲಿನ ಸಂಶೋಧನೆ' (Barefoot Research') ಎಂದು ಕರೆಯುತ್ತಾರೆ. ಕರ್ನಾಟಕ ರಾಜ್ಯ ತರಬೇತುದಾರರ ಗುಂಪು (Karnataka State Trainers' Collective) ಇದರ ಸ್ಥಾಪಕ–ಸದಸ್ಯರೂ ಹೌದು. ಅವರನ್ನು periodi@azimpremjifoundation.org ಮೂಲಕ ಸಂಪರ್ಕಿಸಬಹುದು.


ಅನುವಾದ: **ರೋಹಿಣಿ ಮುಂಡಾಜೆ** | ಪರಿಶೀಲನೆ: **ಲತಾ ಕೆ.ಸಿ.**